# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013–14ನೇ ಸಾಲಿನಲ್ಲಿ, 2009–10 ಮತ್ತು 2010–11ನೇ ಸಾಲುಗಳಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ ಪಾವತಿಸುವ ಕುರಿತು

**ಪ್ರಸ್ತಾವನೆ**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಳಗಾಂ, ಚಿಕ್ಕಮಗಳೂರು ಶಿವಮೊಗ್ಗ ರವರು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ 2009–10 ಮತ್ತು 2010–11ನೇ ಸಾಲಿಗೆ ಸಂಬಂಧಿಸಿದಂತೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನವನ್ನು -ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಇದರನ್ವಯ 2009–10 ಮತ್ತು 2010–11ನೇ ಸಾಲುಗಳಿಗೆ ಸಂಬಂಧಿಸಿದಂತೆ ಮಹಾಲೇಖಪಾಲರು ಆಡಿಟ್ ನಡೆಸಿದಾಗ ಬಹಳಷ್ಟು ಜಿಲ್ಲಾ ಪಂಚಾಯತ್‌ಗಳಲ್ಲಿ ಉದ್ದೇಶಿತ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲಾದ ಅನುದಾನವನ್ನು ವಿನಿಯೋಗಿಸದೇ ಉಳಿಕೆಯಾಗಿಟ್ಟುಕೊಂಡಿರುವುದನ್ನು ಆಕ್ಷೇಪಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಹಿತದೃಷ್ಟಿಯಿಂದ ಉಳಿಕೆ ಇಟ್ಟುಕೊಂಡಿರುವ, ಮಂಡ್ಯ, ಬೀದರ್, ಗುಲ್ಬರ್ಗಾ, ಮೈಸೂರು, ಬಳ್ಳಾರಿ, ಕೊಪ್ಪಳ ಮತ್ತು ಕೋಲಾರ್ ಜಿಲ್ಲಾ ಪಂಚಾಯತ್‌ಗಳಿಂದ ರೂ.135.53 ಲಕ್ಷಗಳನ್ನು ಹಿಂಪಡೆದು ಅನುದಾನ ಬಿಡುಗಡೆಗೆ ಕೋರಿರುವ ಬೆಳಗಾಂ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗಳಿಗೆ ಮರು ಹಂಚಿಕೆ ಮಾಡಿ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 46 ಜೈಅಯೋ 2012(ಪಿ), ಬೆಂಗಳೂರು**

**ದಿನಾಂಕ 21.08.2013.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2009–10 ಮತ್ತು 2010–11ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಕೇಂದ್ರ ಸಹಾಯಧನ ಪಾವತಿಗಾಗಿ, ಉಳಿಕೆ ಇಟ್ಟುಕೊಂಡಿರುವ ಮಂಡ್ಯ, ಬೀದರ್, ಗುಲ್ಬರ್ಗಾ, ಮೈಸೂರು, ಬಳ್ಳಾರಿ, ಕೊಪ್ಪಳ ಮತ್ತು ಕೋಲಾರ್ ಜಿಲ್ಲಾ ಪಂಚಾಯತ್‌ಗಳಿಂದ ರೂ.135.53 ಲಕ್ಷಗಳನ್ನು (ಒಂದುನೂರಾ ಮೂವತ್ತೈದು ಲಕ್ಷದ ಐವತ್ಮೂರು ಸಾವಿರಗಳು ಮಾತ್ರ) ಹಿಂಪಡೆದು ಬೆಳಗಾಂ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗಳಿಗೆ ಈ ಕೆಳಕಂಡಂತೆ ಮರು ಹಂಚಿಕೆ ಮಾಡಿ ವರ್ಗಾಯಿಸಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಬಾಕಿ ಉಳಿಸಿಕೊಂಡಿರುವ ಜಿಲ್ಲಾ ಪಂಚಾಯತ್ | ಹಿಂಪಡೆದ ಅನುದಾನ | ಮರುಹಂಚಿಕೆ ಮಾಡಲಾದ ಅನುದಾನ | ಮರುಹಂಚಿಕೆ ಮಾಡಲಾದ ಜಿಲ್ಲಾ ಪಂಚಾಯತ್ |
|---|---|---|---|---|
| 1 | ಮಂಡ್ಯ | 28.15 | 28.15 | ಶಿವಮೊಗ್ಗ |
| 2 | ಬೀದರ್ | 10.57 | 10.57 | ಚಿಕ್ಕಮಗಳೂರು |
| 3 | ಗುಲಬರ್ಗಾ | 15.60 | 9.67 | |
| | | | 5.93 | ಬೆಳಗಾಂ |
| 4 | ಮೈಸೂರು | 43.80 | 43.80 | |
| 5 | ಬಳ್ಳಾರಿ | 16.91 | 16.91 | |
| 6 | ಕೊಪ್ಪಳ | 11.10 | 11.10 | |
| 7 | ಕೋಲಾರ | 9.40 | 9.40 | |
| | **ಒಟ್ಟು** | **135.53** | **135.53** | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ, ಬೀದರ್, ಗುಲ್ಬರ್ಗಾ, ಮೈಸೂರು, ಬಳ್ಳಾರಿ, ಕೊಪ್ಪಳ ಮತ್ತು ಕೋಲಾರ ರವರುಗಳು ತಮ್ಮ ಜಿಲ್ಲೆಗೆ ಸಂಬಂಧಿಸಿದ ಅನುದಾನವನ್ನು ಬ್ಯಾಂಕ್/ಖಜಾನೆಯಿಂದ ಡ್ರಾ ಮಾಡಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮರು ಹಂಚಿಕೆ ಮಾಡಲಾದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಬೆಳಗಾಂ ಜಿಲ್ಲಾ ಪಂಚಾಯತ್‌ಗಳಿಗೆ ಕೂಡಲೇ ಕಳುಹಿಸಿಕೊಡತಕ್ಕದ್ದು. ಮರುಹಂಚಿಕೆ ಮಾಡಲಾದ ಅನುದಾನವನ್ನು ಪಡೆಯುವಲ್ಲಿ ಹಾಗೂ ವರ್ಗಾಯಿಸುವಲ್ಲಿ ಸಂಬಂಧಿಸಿದ ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸಬೇಕಾಗಿರುತ್ತದೆ.

ಸದರಿ ಅನುದಾನವನ್ನು ಹಿಂಪಡೆದು ಮರು ಹಂಚಿಕೆ ಮಾಡಲಾದ ಜಿಲ್ಲಾ ಪಂಚಾಯತ್‌ಗಳು 2009–10–2010–11ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ಕೇಂದ್ರ ಸಹಾಯಧನ ಬಾಕಿ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡಬಾರದು. ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿರುತ್ತದೆ.

ಮರು ಹಂಚಿಕೆ ಮಾಡಲಾದ ಅನುದಾನವನ್ನು 2810–60–196–6–01 ರಡಿ ವೆಚ್ಚ ಭರಿಸಿ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: 260 ಪಿಬಿಎಸ್ 2013 ದಿನಾಂಕ 05.07.2013 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Hemalatha
**(ಪಿ.ಹೇಮಲತ)**
ನಿರ್ದೇಶಕರು(ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

6. ಮಹಾಲೇಖಪಾಲರು, ಕರ್ನಾಟಕ , ಬೆಂಗಳೂರು
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಚಿಕ್ಕಮಗಳೂರು ಬೆಳಗಾಂ ಮಂಡ್ಯ, ಬೀದರ್, ಗುಲ್ಬರ್ಗಾ, ಮೈಸೂರು, ಬಳ್ಳಾರಿ, ಕೊಪ್ಪಳ ಮತ್ತು ಕೋಲಾರ
8. ಉಪಕಾರ್ಯದರ್ಶಿ/ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಚಿಕ್ಕಮಗಳೂರು ಬೆಳಗಾಂ ಮಂಡ್ಯ, ಬೀದರ್, ಗುಲ್ಬರ್ಗಾ, ಮೈಸೂರು, ಬಳ್ಳಾರಿ, ಕೊಪ್ಪಳ ಮತ್ತು ಕೋಲಾರ
9. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಚಿಕ್ಕಮಗಳೂರು ಬೆಳಗಾಂ ಮಂಡ್ಯ, ಬೀದರ್, ಗುಲ್ಬರ್ಗಾ, ಮೈಸೂರು, ಬಳ್ಳಾರಿ, ಕೊಪ್ಪಳ ಮತ್ತು ಕೋಲಾರ
10. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂಚಾಯತ್ ರಾಜ್ ಇಲಾಖೆ
5. ರಕ್ಷಾ ಕಡತಕ್ಕೆ
6. ಹೆಚ್ಚುವರಿ ಪ್ರತಿ